MADAM SPEAKER.—Now the Question Hour is over

2-00 P. M.

CALLING ATTENTION TO A MATTER OF URGENT PUBLIC IMPORTANCE

Re-coilection of levy on Ragi crop

SRI B. PUTTASWAMAIAH : (Ramanagaram)—Madam, I call the attention of the Minister for Food and Forests to the hardship caused to the ryots due to collection levy on ragi.

SRI K. H. PATIL (Minister for Food and Forests) :— Madam, in response to the Calling Attention Notice, I wish to make the following statement :

This year in addition to paddy and jowar, *R*agi is also being procured from the growers under the Levy System in order to build up stocks of coarse foodgrains. The anticipated production of ragi during this year is about 10.6 lakh tonnes. A target of 25,000 tonnes has been fixed for this grain.

2. Ragi is being procured under the Karnataka Ragi Procurement (Levy) Order, 1973 at the rate of Rs. 70 per quintal and at the scales mentioned therein.

3. According to the scales prescribed in the Ragi Levy Order, no levy is required to be paid by the grower in respect of the first acre of his holding. In respect of every acre of the holding of a grower, where such holding exceeds one acre but does not exceed ten acres, the levy required to be paid is at the rate of 1½ quintals per acre if the land is irrigated under Government source of irrigation or from wells. For other lands the scale of levy is at the rate of 37½ Kgs. per acre.

4. The Levy Order which has been issued under the Essential Commodities Act implies a levy not on the land as such, but on the crop grown, of which there should be surplus left with the grower after giving set-off for family requirements and seed purposes etc. No levy can be collected if there is failure of crops.

5. Besides, the Deputy Commissioners have been authorised to grant remissions in the quantum of levy on the basis of annevari in drought and flood-affected areas. The scales of remissions are as follows :—

(i) Total remission	....	If the annevari is below 4 annas.
(ii) 50% remission	....	If the annevari is between 4 annas & 6 annas.
(iii) 25% remission	....	If the annevari is between 6 annas & 8 annas.

6. Failure of ragi crops have been reported in Arsikere Taluk of Hassan District and Ramanagaram in Bangalore District. No such reports have been received from the other Districts.

7. However, applications received from the growers seeking redress consequent on the failure of ragi crops will be considered sympathetically by the Deputy Commissioners concerned.

ಶ್ರೀ ಹೆಚ್. ಎಸ್. ಸಿದ್ದಪ್ಪ.—ನನ್ನ ತಾಲ್ಲೂಕ್‌ನಲ್ಲಿ ರಾಗಿ ಬೆಳೆ ಹಾಳಾಗಿ ಜನರು ಬವಣೆಪಡುತ್ತಿದ್ದಾರೆ. ಒಂದು ಎಕರೆಗೆ ಒಂದು ಗಾಡಿ ಹುಲ್ಲು ಸಹ ಆಗಿಲ್ಲ ; ಮತ್ತು ಎಕರೆಗೆ ಒಂದು ಕ್ವಿಂಟಾಲ್ ರಾಗಿ ಸಹ ಆಗಿಲ್ಲ ; ಈ ಬಗ್ಗೆ ನಾನು ತಮಗೆ ಒಂದು ಕಾಗದ ಸಹ ಬರೆದಿದ್ದೆ. ಅದರ ಆಧಾರದ ಮೇಲೆ ತಾವು ತಮ್ಮ ಅಧಿಕಾರಿಗಳಿಂದ ತನಿಖೆ ಮಾಡಿಸಬಹುದಾಗಿತ್ತು ; ಆದರೆ ಮಾಡಿಸಲಿಲ್ಲವೆಂದು ಕಾಣುತ್ತದೆ ; ಈಗಲಾದರೂ ತಾವು ಸಮಯವಿದ್ದರೆ ನನ್ನ ಜೊತೆಯಲ್ಲಿ ಒಂದು ದಿವಸದ ಮಟ್ಟಿಗೆ ಬಂದರೆ ಬೆಳೆ ಹಾಳಾಗಿರುವುದನ್ನು ತೋರಿಸುತ್ತೇನೆ. ಮುಖ್ಯವಾಗಿ ಅರಸೀಕೆರೆ ತಾಲ್ಲೂಕ್‌ನ ಕಣಕಟ್ಟೆ ಮತ್ತು ಗಂಡಸಿಯಲ್ಲಿ ಪೂರ್ಣವಾಗಿ ಬೆಳೆ ಹೊರಟು ಹೋಗಿದೆ. ಅಲ್ಲಿ ಬೆಳೆದ ರಾಗಿ ತೆನೆ ಒಂದರಲ್ಲಿ ನಾಲ್ಕು ಕಾಳು

(ಶ್ರೀ ಹೆಚ್. ಎನ್. ಸಿದ್ದಪ್ಪ)

ನಹ ಆಗಿಲ್ಲ; ತಾವು ತಮ್ಮ ಉತ್ತರದಲ್ಲಿ ರೈತ ತನ್ನ ಸಂಸಾರಕ್ಕೆ ಆಗುವಷ್ಟು ಇಟ್ಟುಕೊಂಡು ಉಳಿದರೆ ಲೆವಿ ಕೊಡಬೇಕೆಂದು ಹೇಳಿದ್ದೀರಿ. ಆದರೆ ಅವರು ಬೆಳೆದಿದ್ದು 6 ತಿಂಗಳಿಗೂ ಸಹ ಸಾಲದೇ ಇರುವಾಗ ಅಧಿಕಾರಿಗಳು ಒಂದೇ ಸಮನೆ ಲೆವಿ ಕೊಡಬೇಕೆಂದು ನೋಟೀಸ್ ಜಾರಿ ಮಾಡುತ್ತಿದ್ದಾರೆ. ರೈತರನ್ನು ತಮ್ಮ ರೆವಿನ್ಯೂ ಅಧಿಕಾರಿಗಳು ಬಗ್ಗು ಬಡಿಯುತ್ತಿದ್ದಾರೆ. ನಾನು ಇದನ್ನು ವಿವರವಾಗಿ ಬರೆದು ತಿಳಿಸಿದರೂ ಸಹ ತಮಗೆ ಕರುಣೆ ಬರಲಿಲ್ಲ; ಈಗಲಾದರು ಒಬ್ಬರು ಅಧಿಕಾರಿಗಳನ್ನು ಅಲ್ಲಿಗೆ ಕಳಿಸಿ ತನಿಖೆ ಮಾಡಿಸಿ ನಾನು ಹೇಳಿದ ಎರಡು ಸ್ಥಳಗಳಲ್ಲಿ ಲೆವಿ ಮನ್ನಾ ಮಾಡಬೇಕು. ತಾವು ಸಹ ರೈತನ ಮಗನಾಗಿದ್ದೀರಿ. ಆದಕಾರಣ ತಮ್ಮ ಮನಸ್ಸನ್ನು ವಿಶಾಲ ಮಾಡಿಕೊಂಡು ರೈತರಿಗೆ ಸಹಾಯ ಮಾಡಬೇಕು; ಆವರ ಒಂದು ಶಾಪಕ್ಕೆ ಹೊಣೆಯಾಗಬೇಡಿ ಎಂದು ಅಧ್ಯಕ್ಷರ ಮೂಲಕ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರ ಪ್ರಶ್ನೆಗಳಿಗೆಲ್ಲಾ ನನ್ನ ಸ್ಟೇಟ್‌ಮೆಂಟ್‌ನಲ್ಲಿ ಉತ್ತರ ಇದೆ. ಅವರು ಎರಡು ಹೋಬಳಿಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅವು ಸಹ ಈ ಆರ್ಡರ್‌ಗೆ ಅನ್ವಯವಾಗುತ್ತವೆ. ಆದರೂ ಸಹ ಅದರ ಬಗ್ಗೆ ವಿಶೇಷ ಗಮನ ತೆಗೆದುಕೊಂಡು ರೈತರಿಗೆ ತೊಂದರೆ ಯ್ಯಾಗದಂತೆ ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಅಧ್ಯಕ್ಷರೇ, ತಮಗೂ ಸಹ ರಾಗಿ ಬೆಳೆಯ ಬಗ್ಗೆ ವಿಶೇಷವಾದ ಮಾಹಿತಿ ಇದೆ. ರಾಗಿ ಬಿತ್ತನೆಯಾದಾಗ ಸರ್ವೇ ಸಾಧಾರಣವಾಗಿ ಮಳೆ ಬರಬೇಕು. ನಂತರ ಅರಗಣೆಯಾದಾಗ ಮಳೆ ಬರಬೇಕು. ಅದೃಷ್ಟವಶಾತ್ ಈ ಸಲ ಒಳ್ಳೆಯ ಮಳೆಯಾಯಿತು. ಸುಮಾರು 48 ದಿವಸದ ವರೆಗೆ ಮಳೆಯಾದ್ದರಿಂದ ಬೆಳೆದ ಪೈರೆಲ್ಲಾ ಹಾಳಾಗಿ, ಪೈರನ್ನು ಬಿಡಿಸುವುದಕ್ಕೆ ಆಗಲಿಲ್ಲ; ಇದರಿಂದ ರೈತರಿಗೆ ಬಹಳ ನಷ್ಟವಾಯಿತು. ನಮ್ಮ ಸಂಪ್ರದಾಯದ ಪ್ರಕಾರ ಬೆಳೆದ ಬೆಳೆಯಲ್ಲಿ ಅಗಸ, ಕ್ಷೌರಿಕ, ತೋಟಿ, ತಳವಾರ, ದೇವಸ್ಥಾನದ ಅರ್ಚಕ ಮುಂತಾದವರಿಗೆಲ್ಲಾ ರಾಗಿ ಕೊಡಬೇಕು. ಹಬ್ಬ ತಿಥಿಗಳಿಗೆ ಅದನ್ನೇ ಉಪಯೋಗ ಮಾಡಬೇಕು, ಮದುವೆ ಮುಂಜಿಗೆ ಅದನ್ನೇ ಉಪಯೋಗ ಮಾಡ ಬೇಕು. ವರ್ಷಕ್ಕೆ ಆಗುವಷ್ಟು ಇಟ್ಟುಕೊಳ್ಳಬೇಕು; ಆದರೆ ಈ ಸಲ ಬೆಳೆ ಹಾಳಾಗಿರುವುದರಿಂದ ಲೆವಿ ಕೊಡುವುದು ಕಷ್ಟವಾಗಿದೆ. ಆದಕಾರಣ ಅವರು ಈ ಸಲ ರಾಗಿ ಲೆವಿಗೆ ಕೈಹಾಕಬಾರದೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿ

ಕೊಳ್ಳುತ್ತೇನೆ. ಈಗಾಗಲೇ ರೈತರು ಬತ್ತದ ಲೆವಿಯನ್ನು ವಿರೋಧ ಮೂಡದೆ ನಮ್ರತೆಯಿಂದ ಕೊಟ್ಟಿದ್ದಾರೆ. ಆದ್ದರಿಂದ ಇದರ ಲೆವಿಯನ್ನು ಮನ್ನಾ ಮೂಡ ಬೇಕು, ರಾಜ್ಯದ ಎಲ್ಲ ಭಾಗಗಳಲ್ಲಿಯೂ ರಾಗಿಯನ್ನು ಬೆಳೆಯುತ್ತಿಲ್ಲ; ಹಳೆಯ ಮೈಸೂರು ಭಾಗದಲ್ಲಿ ಮಾತ್ರ ಬೆಳೆಯಲಾಗುತ್ತಿದೆ. ಈ ಸಲ ಬೆಳೆದ ಬೆಳೆ ರೈತರಿಗೇ ಸಾಲುವುದಿಲ್ಲವಾದ್ದರಿಂದ ಲೆವಿ ಮನ್ನಾ ಮಾಡಬೇಕು. ಇಲ್ಲಿ ಅಣಿವಾರಿ ಬೆಳೆಯ ಆಧಾರದ ಮೇಲೆ ಲೆವಿ ವಸೂಲಿ ಮಾಡಲಾಗುತ್ತದೆ ಎಂದು ಹೇಳಿದ್ದೀರಿ. ಆದರೆ ಅದನ್ನು ಬರೆಯುವವರು ಜಮೀನಿಗೆ ಹೋಗಿ ನೋಡಿ ಬರೆಯುವುದಿಲ್ಲ; ಯಾವುದೋ ಜಗಲಿ ಮೇಲೆ ಕುಳಿತು ಬರೆಯುತ್ತಾರೆ. ಅದನ್ನು ಆಧಾರವಾಗಿ ಇಟ್ಟುಕೊಳ್ಳದೆ ಈ ಸಾಲಿನಲ್ಲಿ ರಾಗಿ ಲೆವಿಯನ್ನು ಮನ್ನಾ ಮಾಡಬೇಕೆಂದು ಆ ಮೂಲಕ ರೈತರನ್ನು ರಕ್ಷಣೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.....ಮಾನ್ಯ ಸದಸ್ಯರ ಕಳವಳವನ್ನು ನಾನು ಗಮನಿಸಿದ್ದೇನೆ. ರೈತರಿಗೆ ವಿನಾಕಾರಣ ತೊಂದರೆ ಕೊಡಬೇಕೆಂಬ ಇಚ್ಛೆ ಸರಕಾರಕ್ಕೆ ಇಲ್ಲ. ಆದರೆ ಸರ್ಕಾರದವರು ಪಟ್ಟಣಗಳಲ್ಲಿರುವ ಬಡ ಜನರಿಗೆ ಆಹಾರವನ್ನು ಪುರವಣೆ ಮಾಡಬೇಕಾಗಿರುವುದರಿಂದ ಲೆವಿಯನ್ನು ವಸೂಲಿ ಮೂಡ ಬೇಕಾಗಿದೆ. ಆ ರೀತಿ ಏನಾದರೂ ಪುರವಣೆ ಮೂಡದಿದ್ದರೆ ಆಹಾರದ ಅಭಾವ ಬಂದಿದೆ, ಸರ್ಕಾರ ಆಹಾರವನ್ನು ಹಂಚುವಲ್ಲಿ ವಿಫಲವಾಗಿದೆ, ಸಂಬಂಧಪಟ್ಟ ಮಂತ್ರಿಗಳು ಆ ಜಾಗ ಬಿಟ್ಟು ಹೋಗಬೇಕು ಎನ್ನುವಂತಹ ಸ್ಲೋಗನ್ ಹಾಕುತ್ತೀರಿ; ಆದಕಾರಣ ಕೆಲಮಟ್ಟಿಗಾದರೂ ಲೆವಿ ವಸೂಲಿ ಮೂಡ ಬೇಕಾಗುತ್ತದೆ. ಆ ರೀತಿ ಲೆವಿ ವಸೂಲಿ ಮೂಡುವಾಗ ರೈತರಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಲಾಗುತ್ತದೆ. ಈ ಸಲ ರಾಗಿ ಬೆಳೆ ಅನೇಕ ಕಡೆ ಹಾಳಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಅದಕ್ಕಾಗಿ ಅಣಿವಾರಿ ಪದ್ಧತಿಯ ಮೇಲೆ ಲೆವಿ ವಸೂಲಿ ಮೂಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ತತ್ಪಶ ಈ ಸದನದ ಸದಸ್ಯರು ಲೆವಿ ವಸೂಲಿ ಮೂಡುವುದನ್ನು ವಿರೋಧ ಮೂಡುತ್ತಾರೆ. ಆದರೆ ಅದಕ್ಕೆ ಅವಕಾಶ ಕೊಡಬಾರದು. ಅದರಿಂದ ಆಗುವ ಸದುಪಯೋಗವನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು. ನಾವು ಲೆವಿ ವಸೂಲಿ ಮೂಡು ವಾಗ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ,....ಈ ಸಲ ರಾಗಿಯ ಬೆಳೆ ಆಗಿಲ್ಲ;

ಶ್ರೀ ಕೆ. ಹೆಚ್. ಪಾಟೀಲ್.—ರಾಗಿ ಬೆಳೆದಿಲ್ಲ ಎನ್ನುವವರು ಬತ್ತವನ್ನು ಲೆವಿ ರೂಪದಲ್ಲಿ ಕೊಟ್ಟರೆ ಅವರಿಗೆ ತೊಂದರೆ ಮೂಡುವುದಿಲ್ಲ.

ಅಧ್ಯಕ್ಷರು.....ರಾಗಿ ಬೆಳೆಯುವ ಕಡೆ ಬತ್ತ ಬೆಳೆಯುವುದಿಲ್ಲ ಎಂಬುದು ತಮಗೆ ಗೊತ್ತಿರಬಹುದು.

ಶ್ರೀ ಕೆ. ಹೆಚ್. ಪಾಟೀಲ್.....ನಮ್ಮಲ್ಲಿ ನೀರಾವರಿ ರಾಗಿ ಎಂದು ಬೆಳೆಯಲಾಗುತ್ತಿದೆ ಮಂಡ್ಯದಲ್ಲಿ ರಾಗಿಯನ್ನು ಬೆಳೆಯುತ್ತಾರೆ. ಅಲ್ಲಿಯೇ ಲೆವಿ ಜಾಸ್ತಿ ವಸೂಲಿ ಆಗುವುದು ;

ಶ್ರೀ ಹೆಚ್. ಎಸ್. ಸಿದ್ದಪ್ಪ.....ನಮ್ಮ ತಾಲ್ಲೂಕ್‌ನಲ್ಲಿ ಸರಾಸರಿ ಮಳೆಯಾಗುವುದು 18 ಅಥವಾ 20 ಇಂಚುಗಳು ಮಾತ್ರ. ಆದರೆ ಈ ಸಲ ನಾನು ಹೇಳಿದಂತಹ ಎರಡು ಗ್ರಾಮಗಳಲ್ಲಿ ಸ್ವಲ್ಪವೂ ಮಳೆಯಾಗದೆ ಬೆಳೆ ಹಾಳಾಯಿತು ;

ಅಧ್ಯಕ್ಷರು.....ಅದನ್ನು ಪರ್ಯಾಲೋಚನೆ ಮಾಡುತ್ತೇವೆಂದು ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ :—ರಾಮನಗರ ಮತ್ತು ಅರಸೀಕೆರೆ ಈ ಎರಡು ತಾಲ್ಲೂಕುಗಳ ವಿಷಯಗಳನ್ನು ತಾವು ಪರ್ಯಾಲೋಚನೆ ಮಾಡುತ್ತೇವೆ ಎಂದು ಹೇಳಿದರೆ ಆಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಹಳೆಯ ಮೈಸೂರು ಪ್ರದೇಶದಲ್ಲಿ ರಾಗಿಯನ್ನು ಹೆಚ್ಚು ಪ್ರದೇಶದಲ್ಲಿ ಬೆಳೆಯುತ್ತಿದ್ದಾರೆ. ಈ ಜನಗಳಲ್ಲಿ ಇವೊತ್ತು ಅಂಬಲಿ ಕುಡಿಯುವುದಕ್ಕೆ ರಾಗಿಲ್ಲ. ಲೆವಿ ಕೊಡಬೇಕೆಂದು ಅಧಿಕಾರಿಗಳು ಈ ಭಾಗದ ರೈತರುಗಳಿಗೆ ನೋಟೀಸ್ ಕೊಟ್ಟಿದ್ದಾರೆ. ಡೆಪ್ಯುಟಿ ಕಮೀಷನರ ಹತ್ತಿರ ಎಷ್ಟೋ ಜನ ರೈತರು ಹೋಗಿ ಈ ಲೆವಿಯನ್ನು ಮನ್ನಾ ಮಾಡಬೇಕೆಂದು ಕೇಳಿಕೊಂಡರೂ ಅವರು ಅದಕ್ಕೆ ಗಮನ ಕೊಡುವುದಿಲ್ಲ. ಲೆವಿ ವಸೂಲು ಮಾಡುವುದಕ್ಕೆ ಅಧಿಕಾರಿಗಳು ಏನಾ ಕಾರಣ ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ರೈತರು ಬಹಳ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ದಯಮಾಡಿ ಈ ರಾಗಿ ಲೆವಿಯನ್ನು ಮನ್ನಾ ಮಾಡಬೇಕು. ಈ ವಿಷಯದಲ್ಲಿ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡಬೇಕು ಎಂದು ಭಕ್ತಿಯಿಂದ ಕೈ ಜೋಡಿಸಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್ :—ಈಗಾಗಲೇ ಈ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರಿವು ಆಗಿದೆ. ಕೆಲವು ಕಡೆ ರಾಗಿ ಲೆವಿ ಬಗ್ಗೆ ಹೇಗೆ ಸಮಂಜಸ ವಿಲ್ಲವೋ ಹಾಗೆಯೇ ಜೋಳದ ಲೆವಿ ಬಗ್ಗೆ ಕೂಡ ಸಮಂಜಸವಿಲ್ಲ. ಆದರ ಸಲುವಾಗಿ ಎಲ್ಲೆಲ್ಲಿ ರೈತರಿಗೆ ತೊಂದರೆ ಇದೆ ಅಂಥಾ ಕಡೆ ಅವರಿಗೆ ತೊಂದರೆಯಾಗದ ರೀತಿಯಲ್ಲಿ ಲೆವಿ ವಸೂಲು ಮಾಡಬೇಕೆಂದು ಸೂಚನೆಯನ್ನು ಕೊಡಲಾಗಿದೆ.